ರಾಮದೇವರ ಬೆಟ್ಟವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಅಭಿವೃದ್ಧಿಪಡಿಸುವುದು

447 : (592)

ಶ್ರೀ ರಾಜು ಕೆ. (ರಾಮನಗರ) (ವಿಧಾನಸಭಾ ಸದಸ್ಯರು)

ಅ) ರಾಮನಗರ ಪಟ್ಟಣದ ಸಮೀಪದಲ್ಲಿ ರಾಮದೇವರ ಬೆಟ್ಟದಲ್ಲಿ ಪುರಾತನವಾದ ದೇವಸ್ಥಾನವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಪುರಾತನವಾದ ಪ್ರಸಿದ್ಧ ದೇವಾಲಯವನ್ನು ಪ್ರೇಕ್ಷಣೀಯ ಸ್ಥಳವಾಗಿ ಪರಿವರ್ತಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಪ್ರವಾಸೋದ್ಯಮ ಇಲಾಖೆಯಿಂದ ಈ ಬೆಟ್ಟವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಎಂದಿನಿಂದ ಅಭಿವೃದ್ಧಿ ಪಡಿಸಲಾಗುವುದು;

ಈ) ಹಾಗಿದ್ದಲ್ಲಿ, ಇದನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಅಭಿವೃದ್ಧಿ-ಪಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಆನಂದ್ ಸಿಂಗ್ (ಮಾನ್ಯ ಪ್ರವಾಸೋದ್ಯಮ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಪ್ರವಾಸೋದ್ಯಮ ಇಲಾಖೆಯಿಂದ ಹಮ್ಮಿಕೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳು

347 : (458)

ಶ್ರೀ ಅಪ್ಪಾಜಿ ಮತ್ತು ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) (ಮಾನ್ಯ ವಿಧಾನಸಭಾ ಸದಸ್ಯರುಗಳು)

ಅ) ಕಳೆದ 3 ವರ್ಷಗಳಿಂದ ಬಿಜಾಪುರ ಜಿಲ್ಲೆಗೆ ರಾಜ್ಯ ಪ್ರವಾಸೋದ್ಯಮ ಇಲಾಖೆಯಿಂದ ಹಮ್ಮಿಕೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳಾವುವು;

ಆ) ಇದಕ್ಕಾಗಿ ಇಲಾಖಾವತಿಯಿಂದ ಬಿಡುಗಡೆಯಾದ ಅನುದಾನವೆಷ್ಟು;

ಇ) ಇದರಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳೆಷ್ಟು (ವಾರ್ಷಿಕವಾರು ವಿವರ ನೀಡುವುದು)?

ಶ್ರೀ ಆನಂದ್ ಸಿಂಗ್ (ಪ್ರವಾಸೋದ್ಯಮ ಸಚಿವರು)

ಅ) ಕಳೆದ 3 ವರ್ಷಗಳಿಂದ ಬಿಜಾಪುರ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ವಿವರಿಸಿದೆ.

ಆ) ಈವರೆಗೆ ಬಿಡುಗಡೆ ಮಾಡಿದ ಅನುದಾನ ರೂ.550.02 ಲಕ್ಷಗಳಾಗಿರುತ್ತದೆ.

ಇ)

ವರ್ಷ	ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ
2009–10	3
2010–11	2
2011–12	–
ಒಟ್ಟು	5

ಅನುಬಂಧ

ಕಳೆದ ಮೂರು ವರ್ಷಗಳಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರ

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಯ ಹೆಸರು	ಅಂದಾಜು ಮೊತ್ತ	ಬಿಡುಗಡೆ ಮಾಡಿರುವ ಮೊತ್ತ	ಪರಾ
	2009–10			
1	ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕು ತೆಲಗಿ ಗ್ರಾಮದ ರೈಲು ನಿಲ್ದಾಣದ ಹತ್ತಿರ ಯಾತ್ರಿನಿವಾಸ ನಿರ್ಮಾಣ ಹಾಗೂ ಕಾಂಪೌಂಡ್ ಗೋಡೆ ನಿರ್ಮಾಣ.	51.34	51.34	ಈ ಯೋಜನೆಯನ್ನು ಕೆ.ಆರ್.ಐ.ಡಿ.ಎಲ್. ಬೆಂಗಳೂರು ರವರ ಮೂಲಕ ಕೈಗೊಂಡಿದ್ದು ಕಾಮಗಾರಿ ಪೂರ್ಣಗೊಂಡಿದೆ.
2	ಬಿಜಾಪುರದ ಗೋಲ್ ಗುಂಬಝ್ ಸ್ಮಾರಕ ಪ್ರದೇಶದಲ್ಲಿ ಧ್ವನಿ ಮತ್ತು ಬೆಳಕು ಯೋಜನೆ	200.00	190.00	ಯೋಜನೆಯನ್ನು ಕೆ.ಎಸ್.ಟಿ.ಡಿ.ಸಿ. ಮೂಲಕ ಜಾರಿಗೊಳಿಸಲಾಗುತ್ತಿದೆ. ಕಾಮಗಾರಿ ಪ್ರಾರಂಭಿಸಲು ಎ.ಎಸ್.ಐ. ಅನುಮತಿ ನಿರೀಕ್ಷಿಸಲಾಗಿದೆ.

ಕ್ರ ಸಂ	ಯೋಜನೆಯ ಹೆಸರು	ಅಂದಾಜು ಮೊತ್ತ	ಬಿಡುಗಡೆ ಮಾಡಿರುವ ಮೊತ್ತ	ಷರಾ
3	ಬಿಜಾಪುರ ಜಿಲ್ಲೆಯ, ಉಕ್ಕಳ್ಳಿ ರೋಡ್‌ನಲ್ಲಿರುವ ಶಿವಮೂರ್ತಿ (ಶಿವಗಿರಿ) ದೇವಸ್ಥಾನದ ಬಳಿ ಶೌಚಾಲಯ ನಿರ್ಮಾಣ	14.88	14.88	ಕಾಮಗಾರಿ ಪೂರ್ಣಗೊಂಡಿದೆ.
4	ಬಿಜಾಪುರ ಜಿಲ್ಲೆಯ ಅಲಮಟ್ಟಿ ಅಣೆಕಟ್ಟು ಪ್ರದೇಶದಲ್ಲಿ ಶೌಚಾಲಯ ನಿರ್ಮಾಣ.	14.88	14.88	ಕಾಮಗಾರಿ ಪೂರ್ಣಗೊಂಡಿದೆ
	2010–11			
5	ಬಿಜಾಪುರ ನಗರದ ವಿಶ್ವವಿಖ್ಯಾತ ಗೋಲಗುಮ್ಮಟ ಸ್ಮಾರಕ ಆವರಣದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಅಳವಡಿಸಿರುವ ಬೆಳಕಿನ ವ್ಯವಸ್ಥೆಯ ಕೇಬಲ್ ದುರಸ್ಥಿ	11.06	11.00	ಈ ಯೋಜನೆಯನ್ನು ಜಿಲ್ಲಾಧಿಕಾರಿಗಳು, ಬಿಜಾಪುರ ರವರ ಮೂಲಕ ಕೈಗೊಂಡಿದ್ದು ಕಾಮಗಾರಿ ಪೂರ್ಣಗೊಂಡಿದೆ

ಕ್ರ ಸಂ	ಯೋಜನೆಯ ಹೆಸರು	ಅಂದಾಜು ಮೊತ್ತ	ಬಿಡುಗಡೆ ಮಾಡಿರುವ ಮೊತ್ತ	ಷರಾ
6	ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಯಾತ್ರಿನಿವಾಸ ನಿರ್ಮಾಣ	180.22	150.00	ಈ ಯೋಜನೆಯನ್ನು ಜಿಲ್ಲಾ ನಿರ್ಮಿತಿಕೇಂದ್ರ, ಬಿಜಾಪುರರವರ ಮೂಲಕ ಕೈಗೊಂಡಿದ್ದು ಲಿಂಟಲ್ ಲೆವೆಲ್ ಕಾಮಗಾರಿ ಪ್ರಗತಿಯಲ್ಲಿದೆ
7	ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ನಿರ್ಮಿಸುತ್ತಿರುವ ಯಾತ್ರಿನಿವಾಸದ ನಿವೇಶನದ ವೆಚ್ಚ	11.16	11.16	ಮುಖ್ಯಾಧಿಕಾರಿ, ಪುರಸಭೆ ಕಾರ್ಯಾಲಯ, ಬಸವನಬಾಗೇವಾಡಿ ರವರಿಗೆ ನಿವೇಶನದ ವೆಚ್ಚವನ್ನು ಪಾವತಿಸಲಾಗಿದೆ.
8	ಬಿಜಾಪುರ ಜಿಲ್ಲೆಯ ಅಲಮಟ್ಟಿ ಅಣೆಕಟ್ಟು ಪ್ರದೇಶದಲ್ಲಿ ಶೌಚಾಲಯ ನಿರ್ಮಾಣ	14.50	14.50	ಈ ಯೋಜನೆಯನ್ನು ಕೆ.ಆರ್.ಐ.ಡಿ.ಎಲ್, ಬೆಂಗಳೂರು ರವರ ಮೂಲಕ ಕೈಗೊಂಡಿದ್ದು ಕಾಮಗಾರಿ ಪೂರ್ಣಗೊಂಡಿದೆ.

ಕ್ರ ಸಂ	ಯೋಜನೆಯ ಹೆಸರು	ಅಂದಾಜು ಮೊತ್ತ	ಬಿಡುಗಡೆ ಮಾಡಿರುವ ಮೊತ್ತ	ಷರಾ
	ಕೇಂದ್ರದ ಯೋಜನೆಗಳು:			
9	ಬಿಜಾಪುರ ಜಿಲ್ಲೆಯ ಬೂತನಾಳ ಕೆರೆ ಪ್ರದೇಶದಲ್ಲಿ ಲ್ಯಾಂಡ್ ಸ್ಕೇಪಿಂಗ್ ಪಾಥ್ ವೇ, ಗಜೆಬೊ, ಆಸನಗಳ ವ್ಯವಸ್ಥೆ ಹಾಗೂ ಶೌಚಾಲಯ ಮುಂತಾದ ಪ್ರವಾಸಿ ಸೌಲಭ್ಯಗಳ ನಿರ್ಮಾಣ	90.33	72.26	ಕಾಮಗಾರಿ ಪೂರ್ಣಗೊಂಡಿದೆ
	2011–12			
10	ಬಿಜಾಪುರ ಜಿಲ್ಲೆಯ ಸೋಮದೇವರಹಟ್ಟಿ ತಾಂಡ ಶ್ರೀ ಬಂಜಾರರ ಕುಲಗುರು ಶ್ರೀ ಮಾತಾ ದುರ್ಗಾದೇವಿ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ	60.00	20.00	ಈ ಯೋಜನೆಯನ್ನು ಜಿಲ್ಲಾನಿರ್ಮಿತಿಕೇಂದ್ರ, ಬಿಜಾಪುರ ರವರ ಮೂಲಕ ಕೈಗೊಂಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ.
	ಒಟ್ಟು	**648.37**	**550.02**	